ಅವರ ಸಾಮುದಾಯಿಕ ಜೀವನಗಳ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ. ಗೊತ್ತಿದ್ದರೂ ನನ್ನ ಕತೆಗಳಿಗೆ ಪಾತ್ರಗಳನ್ನಾಗಿಸಿಕೊಳ್ಳುವಷ್ಟು ಗೊತ್ತಿಲ್ಲ. ನಾನು ಕಂಡಿರುವ ಮಧ್ಯಮ ವರ್ಗದ, ಕಟ್ಟುನಿಟ್ಟಾದ, ಒಂದು ರೀತಿಯಲ್ಲಿ ಬಿಡಿಸಿಕೊಳ್ಳಲು ಹಾತೊರೆಯುತ್ತಿದ್ದರೂ, ಸಂಪ್ರದಾಯದಲ್ಲಿ ಒಂದು ಕಾಲನ್ನು ಗಟ್ಟಿಯಾಗಿ ಹುಗಿದಿಟ್ಟುಕೊಂಡಿರುವ ಈ ಬ್ರಾಹ್ಮಣ ಕುಟುಂಬಗಳ ಜೀವನ ಒಂದು ರೀತಿಯಲ್ಲಿ ವಿಕ್ಷಿಪ್ತವಾದದ್ದು. ಒಂದಲ್ಲ ಒಂದು ರೀತಿಯಲ್ಲಿ ದುರಂತಕ್ಕೆ ಮುಖಮಾಡಿ ನಿಂತಿರುವಂಥಾದ್ದು. ಒಂದು ಸಮಾಜದಲ್ಲಿ ಬದುಕುತ್ತಿರುವ ಕುಟುಂಬ ಕುಟುಂಬಗಳ ನಡುವೆ ದೊಡ್ಡ ಅಂತರಗಳಿವೆ. ಒಂದೇ ಮನೆಯಲ್ಲಿ ಬದುಕುತ್ತಿದ್ದರೂ ವ್ಯಕ್ತಿ ವ್ಯಕ್ತಿಗಳ ನಡುವೆ ಕಂದಕಗಳಿವೆ. ಒಂದಲ್ಲಾ ಒಂದು ರೀತಿಯಲ್ಲಿ **Dysfunctional** ಸಂಸಾರಗಳು ಇವು. ಸದಾ ದುರಂತಗಳಿಗೆ, ಅದೂ ತಾವೇ ತೋಡಿಕೊಂಡ ದುರಂತಗಳಿಗೆ ಮುಖ ಮಾಡಿ ನಿಂತ ಸಂಸಾರಗಳು ಅಥವಾ ವ್ಯಕ್ತಿಗಳು ಇವು. ಒಂದು ಸಣ್ಣ ಉದಾಹರಣೆ ಇಲ್ಲಿ ಅನಗತ್ಯವಾಗೋಲ್ಲ ಎನಿಸುತ್ತದೆ.

ನಮ್ಮಲ್ಲಿ ಒಬ್ಬ ದೂರದ ಸಂಬಂಧಿಯೊಬ್ಬರಿಗೆ ಸರ್ಪಸುತ್ತಾಗಿತ್ತು. ದೇವರಲ್ಲಿ ಅಗಾಧವಾದ ನಂಬಿಕೆ. ಮಾಡಿದ ಅಥವಾ ಕಟ್ಟಿಟ್ಟ ಕರ್ಮದ ಮೇಲೆ ನಂಬಿಕೆ. ತನ್ನ ಜೀವನವೆಲ್ಲಾ ಆ ಶ್ರೀರಾಮಚಂದ್ರನಿಂದ ಸಾಗುತ್ತಿದೆ ಎಂದೇ ನಂಬಿದ್ದವರು. ಹಾಗಾಗಿ ದೇವರ ಪ್ರಸಾದಕ್ಕಿಂತಾ ಅಥವಾ ದೇವರ ಕೃಪೆಗಿಂತಾ ಹೆಚ್ಚಿನ ಔಷಧಿಯ ಅಗತ್ಯ ಇವರಿಗೆ ಕಾಣಲಿಲ್ಲ. ದೇವರಾದರೂ ಎಷ್ಟು ಕೈ ಹಿಡಿದಾನು, ಸರ್ಪಸುತ್ತು ಬೆಳೆಯುತ್ತಾ ಹೋಯಿತು. ಹೆಂಡತಿಗೂ ಮೊದಮೊದಲಲ್ಲಿ ಹೇಳಿರಲಿಕ್ಕಿಲ್ಲ. ಬರಬರುತ್ತಾ ಕೂಡುವುದು, ಮಲಗುವುದು ನರಕಯಾತನೆಗೆ ಒಂದಿಂಚೂ ಕಡಿಮೆಯಿಲ್ಲದಂತಾಯಿತು. ಕುಕ್ಕುರುಗಾಲಿನಲ್ಲಿ ಕೂತೇ ರಾತ್ರಿ ಕಳೆದರೇ ಹೊರತು ದೇವರು ತಮ್ಮ ಕೈ ಬಿಡುವುದಿಲ್ಲವೆಂಬ ನಂಬಿಕೆಯನ್ನ ಕಳೆದುಕೊಳ್ಳಲಿಲ್ಲ. ಕೊನೆಗೆ ಬಲವಂತ ಮಾಡಿ ಡಾಕ್ಟರಲ್ಲಿಗೆ ಕರೆದುಕೊಂಡು ಹೋಗಿ ಈತನನ್ನು ಬದುಕಿಸಿಕೊಂಡಿದ್ದಾಯ್ತು.

ಇದಕ್ಕಿಂತಾ ದುರಂತ ಬೇಕೆ... ಕುರುವಿನ ಗುಲಾಮ ಹುಟ್ಟಿದ್ದೇ ಇಲ್ಲಿಂದ–ಸರ್ಪಸುತ್ತಿಗೆ ಬದಲಾಗಿ ಪೃಷ್ಠದ ಮೇಲಿನ ಒಂದು ಕುರು.

ಈ ಸಂಸಾರಗಳಲ್ಲಿ ಕಾಮ ಕೂಡಾ ಸಂಸಾರದಲ್ಲಿ ಪಾಲಿಸಲೇ ಬೇಕಾದ ಅನೇಕ ಕರ್ತವ್ಯಗಳಲ್ಲಿ ಒಂದು. ಅದೊಂದು ಸುಂದರ ಅನುಭವವಲ್ಲ, ಪ್ರೀತಿಯ ಮತ್ತೊಂದು ಮಜಲು ಅಲ್ಲ. ಗಡಿಯಾರಕ್ಕೆ ಕೀಲಿ ಕೊಟ್ಟಂತೆ, ರಾತ್ರಿಯ ಅಗತ್ಯಗಳಲ್ಲಿ ಒಂದು. ಅದಕ್ಕೇ ದಾಂಪತ್ಯ ಜೀವನ ಒಂದು ಹಂತ ತಲುಪಿದ ಕೂಡಲೇ ಗಂಡಹೆಂಡತಿಯರ ಸಂಬಂಧ ವ್ಯಾವಹಾರಿಕವಾಗಿಬಿಡುತ್ತದೆ. ಗಂಡ ದುಡಿದು ತಂದುಹಾಕುತ್ತಾನೆ, ಹೆಂಡತಿ ಮನೆ ನಡೆಸುತ್ತಾ ಸಾಗುತ್ತಾಳೆ. ಅಲ್ಲಿಗೆ ಮನೆಯಲ್ಲಿ ಹಲವು ನಡುಗಡ್ಡೆಗಳಾಗಿ ಜೀವನ ಒಂದು ನಿರ್ದಿಷ್ಟ ಕೋಷ್ಟಕಗಳಾಗಿ ಬಿಡುತ್ತವೆ. ನನ್ನ ಕತೆಗಳ ಎಲ್ಲಾ ಪಾತ್ರಗಳು ಈ ಪರಿಸರದಿಂದ ಬಂದಂಥವು.

ಒಮ್ಮೆ ಈ ಪಾತ್ರಗಳು ನನ್ನಲ್ಲಿ ಕೆನೆಗಟ್ಟಿಕೊಂಡ ಮೇಲೆ ನಾನು ಕತೆಯ ಘಟನೆಗಳನ್ನು ಹುಡುಕುತ್ತಾ ಹೋಗುತ್ತೇನೆ. ಘಟನೆಗಳು ಕೂಡಾ ಈ ಪಾತ್ರಗಳು ಸೃಷ್ಟಿಸಿಕೊಂಡಂಥವೇ ಆಗಬೇಕು. ನನ್ನ ಕತೆಗಳು ಆ ಪಾತ್ರಗಳ ಸುತ್ತ ನಡೆಯುತ್ತಿರಬೇಕು, ಅಂದರೆ ಘಟನೆಗಳು ಪಾತ್ರಗಳಿಂದ ಹುಟ್ಟಿಕೊಂಡಿದ್ದಾಗಿರಬೇಕೇ ಹೊರತು, ಘಟನೆಗಳಿಂದ ಪಾತ್ರಗಳು ಹುಟ್ಟಿಕೊಂಡಿರಬಾರದು. ಪಾತ್ರಗಳೇ ಹುಟ್ಟಿಹಾಕಿಕೊಂಡ ಘಟನೆಗಳಾಗಿರಬೇಕು. ಸ್ವಯಂಕೃತ ಅಂತೇವಲ್ಲ ಅದು. ಗಳಿಗೆ ಗಳಿಗೆಗೂ ಕಾಡುವ ಅಪಾನವಾಯು, ಭಕ್ತಿಯಿಂದ ದೊರೆತ